ಚಳ್ಳಕೆರೆ ಜೆಎಂಎಫ್‌ಸಿ ನ್ಯಾಯಾಲಯದ ವ್ಯಾಪ್ತಿ ಬದಲಾವಣೆಗಳು

1238 (1650) ಶ್ರೀ ಬಸವರಾಜ್ ಮಂಡಿಮಠ್ ಜಿ. (ಚಳ್ಳಕೆರೆ) : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ಜೆ ಎಂ ಎಫ್ ಸಿ ವ್ಯಾಪ್ತಿಯಿಂದ ತಳಕು ಹೋಬಳಿಯ 40 ಗ್ರಾಮಗಳನ್ನು ಸುಮಾರು 55 ಕಿ.ಮೀ. ದೂರದ ಮೊಳಕಾಲ್ಮೂರು ಜೆಎಂಎಫ್‌ಸಿ ವ್ಯಾಪ್ತಿಗೆ ವರ್ಗಾಯಿಸಿರುವುದು ನಿಜವೆ?

ಆ) ವರ್ಗಾಯಿಸಿದ ಗ್ರಾಮಗಳಲ್ಲಿ ಸುಮಾರು ಅರ್ಧದಷ್ಟು ಗ್ರಾಮಗಳು ಮೊಳಕಾಲ್ಮೂರು ಪಟ್ಟಣದಿಂದ ಸುಮಾರು 100 ಕಿ.ಮೀ ದೂರದವರೆಗೆ ಇದ್ದು: ಸದರಿ ಗ್ರಾಮಗಳ ಕಕ್ಷಿದಾರರಿಗೆ ತೀವ್ರ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಸದರಿ ಗ್ರಾಮಗಳನ್ನು ಚಳ್ಳಕೆರೆ ಜೆಎಂಎಫ್‌ಸಿ ವ್ಯಾಪ್ತಿಗೆ ಪುನರ್ ವಾಪಸ್ ತರುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :

ಅ) ಹೌದು.

ಆ) ಹೌದು.

ಇ) ಚಳ್ಳಕೆರೆ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ೪೦ ಹಳ್ಳಿಗಳನ್ನು ಮೊಳಕಾಲ್ಮೂರು ನ್ಯಾಯಾಲಯದ ವ್ಯಾಪ್ತಿಗೆ ಸೇರಿಸುವ ಅಧಿಸೂಚನೆ ದಿನಾಂಕ:೨೩-೧೦-೯೯, ಇದನ್ನು ಸರ್ಕಾರ ಹೊರಡಿಸಿತ್ತು. ನಂತರ ಚಳ್ಳಕೆರೆಯ ವಿವಿಧ ಸಂಘ, ಸಂಸ್ಥೆಗಳ ಮನವಿಗಳನ್ನು ಪರಿಶೀಲಿಸಿ, ಸರ್ಕಾರದ ಅಧಿಸೂಚನೆಯನ್ನು ತಡೆ ಹಿಡಿದು, ಈ ಮೊದಲು ಚಾಲ್ತಿಯಲ್ಲಿದ್ದ ವ್ಯವಸ್ಥೆಯನ್ನು ಮುಂದುವರಿಸುವ ಬಗ್ಗೆ ಉಚ್ಚ ನ್ಯಾಯಾಲಯದ ಅಭಿಪ್ರಾಯ :ಸಹಮತಿಯನ್ನು ಕೋರಲಾಗಿದೆ. ಉಚ್ಚ ನ್ಯಾಯಾಲಯದಿಂದ ಸಹಮತಿ: ಅಭಿಪ್ರಾಯ ಬಂದ ಕೂಡಲೇ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾವಾರು ಪ್ರವಾಸಿ ನಿವಾಸದ ವಿವರ

1239 (1490) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಇಲಾಖೆಯ ನಡೆಸುತ್ತಿರುವ ಪ್ರವಾಸಿ ನಿವಾಸಗಳು ಯಾವುವು? ಮತ್ತು ಅವು ಎಲ್ಲೆಲ್ಲಿ ಇದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಸಾರ್ವಜನಿಕರಿಗೆ ಉತ್ತಮ ಸೌಲಭ್ಯ ಒದಗಿಸುತ್ತಿರುವ ಪ್ರವಾಸಿ ನಿವಾಸಗಳು ಯಾವುವು?

ಇ) ಸದರಿ ಪ್ರವಾಸಿ ನಿವಾಸಗಳಲ್ಲಿ ವಿಧಿಸಲಾಗಿರುವ ದಿನದ ಬಾಡಿಗೆಯ ದರ ಮತ್ತು ಇತರ ದರಗಳು ಎಷ್ಟೆಷ್ಟು?

ಈ) ರಾಜ್ಯದಲ್ಲಿ ಪ್ರವಾಸಿ ನಿವಾಸಗಳನ್ನು ಅಭಿವೃದ್ಧಿ ಪಡಿಸಲು ಅದಕ್ಕೆ ಆಯ್ಕೆ ಮಾಡಿದ ಸ್ಥಳಗಳು ಯಾವುವು?